**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 06-03-2026)**

**ಪಾಟೀ ಸವಾಲುಃ ವಾದಿ ಪರ ಶ್ರೀ ಆರ್. ಆರ್. ಎಸ್ ವಕೀಲರಿಂದ,**

ನಾನು ಸಾಕ್ಷಿ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ದಾಖಲಿಸಿರುತ್ತೇನೆ. ಸ್ದ್ರಿ ಪ್ರಮಾಣ ಪತ್ರಕ್ಕೆ ನಾನೆ ಮಾಹಿತಿ ನೀಡಿರುತ್ತೇನೆ. ಈ ದಾವೆಯನ್ನು ವೆಂಕಟೇಶ್ ಶೇಟ್ ಎಂಬುವರು ಅನಂತ ಗೊಯ್ದಪ್ಪ ನಾಯ್ಕರವರ ವಿರುದ್ಧ ದಾಖಲಿಸಿರುತ್ತಾರೆ. ಈ ದಾವೆಯನ್ನು ವಿನಾಯಕ ವೆಂಕಟೇಶ್ ಶೇಟ್ ರವರು ಸಂಪೂರ್ಣ ಜಾಗ ತನ್ನದು ಎಂದು ಹೇಳಿ ಕೇಸು ದಾಖಲಿಸಿರುತ್ತಾರೆ. ಈ ದಾವೆಯಲ್ಲಿರುವ ಸ್ವತ್ತಿನ ಸರ್ವೆ ನಂಬರ್ 6 ಹಿಸ್ಸಾ ಬ1 ಆಗಿರುತ್ತದೆ. ಅದರಲ್ಲಿ ಒಟ್ಟು 17ಗುಂಟೆ ಜಾಗ ಇರುತ್ತದೆ. ಸ್ದ್ರಿ ಜಾಗದ ಚತುರ್ಗಡಿ ನನಗೆ ಗೊತ್ತು. ಉತ್ತರಕ್ಕೆ ರಸ್ತೆ ಇರುತ್ತದೆ. ಪಶ್ಚಿಮಕ್ಕೆ ಮನೆ ಇರುತ್ತದೆ. ಪೂರ್ವಕ್ಕೆ ದುರ್ಗಾ ದುರ್ಗಪ್ಪ ನಾಯ್ಕ ರವರ ಮನೆ ಇರುತ್ತದೆ. ದಕ್ಷಿಣಕ್ಕೆ ವೆಂಕಟ್ರಮಣ ದೇವಾಡಿಗ ರವರ ಜಾಗ ಮತ್ತು ರತ್ನಾ ನಾಗೇಶ್ ನಾಯ್ಕ ರವರ ಮನೆ ಇರುತ್ತದೆ. ದಾವಾ ಆಸ್ತಿಯು ವಾದಿಯ ಗಂಡ ವೆಂಕಟೇಶ್ ಶೇಟ್ ರವರು ಡಿಕ್ರಿ ಸರ್ಟಿಫಿಕೇಟ್ ಮೂಲಕ ಪಡೆದುಕೊಂಡಿರುತ್ತಾರೆ ಎಂದರೆ ಹೌದು. ಸ್ದ್ರಿ ಡಿಕ್ರಿ ಸರ್ಟಿಫಿಕೇಟ್ ನ್ನು ನಾನು ನೋಡಿರುತ್ತೇನೆ. ಆ ಪ್ರಕಾರ ವಾದಿಯ ಗಂಡ ವೆಂಕಟೇಶ್ ಶೇಟ್ ರವರಿಗ ಸಂಪೂರ್ಣ 17 ಗುಂಟೆ ಜಾಗವನ್ನು ಡಿಕ್ರಿ ಸರ್ಟಿಫಿಕೇಟ್ ಮೂಲಕ ನೀಡಲಾಗಿರುತ್ತದೆ ಎಂದರೆ ಸಾಕ್ಷಿಯು ಸಂಪೂರ್ಣ 17 ಗುಂಟೆ ಜಾಗ ನೀಡಿರುವ ಬಗ್ಗೆ ನಮಗೆ



ಗೊತ್ತಾಗಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸ್ದ್ರಿ ಡಿಕ್ರಿ ಸರ್ಟಿಫಿಕೇಟ್ 1992ನೇ ಇಸವಿಯಲ್ಲಿ ಆಗಿರುತ್ತದೆ. 1992ನೇ ಇಸವಿಯಲ್ಲಿ ಕಬ್ಜಾ ಬಿಟ್ಟುಕೊಟ್ಟಿದ್ದಿರ ಎಂದರೆ ಸಾಕ್ಷಿಯು ಕೊಟ್ಟಿರುತ್ತೇವೆ ಎಂಟೂವರೆ ಗುಂಟಾ ಜಾಗದ ಕಬ್ಜಾ ಬಿಟ್ಟುಕೊಟ್ಟಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ತದನಂತರ 17 ಗುಂಟೆ ಜಾಗಕ್ಕೆ ಮತ್ತೆ ಬಂದಿದ್ದಿರ ಎಂದರೆ ಸಾಕ್ಷಿಯು ಬಂದಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾನು ಆ ರೀತಿ 1993ನೇ ಇಸವಿಯಲ್ಲಿ ಬಂದಿರುತ್ತೇನೆ. ಪ್ರಸ್ತುತ ನಾನು ನನ್ನ ಪತ್ನಿಯ ತಾಯಿ ಮನೆಯಲ್ಲಿ ವಾಸವಾಗಿರುತ್ತೇನೆ. ಆ ರೀತಿ ಈ ಮೇಲೆ ಹೇಳಿದ 17 ಗುಂಟೆ ಜಾಗದ ಪೂರ್ವಕ್ಕೆ ಇರುವ ದುರ್ಗ ದುರ್ಗಪ್ಪ ನಾಯ್ಕ ರವರ ಮನೆಯಲ್ಲಿ ವಾಸವಾಗಿದ್ದೇನೆ. ಸ್ದ್ರಿ ದುರ್ಗ ದುರ್ಗಪ್ಪ ನಾಯ್ಕರವರ ಮನೆಗೆ 1998ನೇ ಇಸವಿಯಿಂದ ವಾಸ ಮಾಡುತ್ತಿದ್ದೇನೆ. ಈ ಮೇಲೆ ಹೇಳಿದಂತಹ 17 ಗುಂಟೆ ಜಾಗದ ಚತುರ್ಗಡಿಗಳನ್ನು ಅಂದಾಜಿನ ಮೇಲೆ ಹೇಳುತ್ತಿದ್ದೇನೆ. 1998ನೇ ಇಸವಿಗಿಂತ ಪೂರ್ವದಲ್ಲಿ 17 ಗುಂಟೆ ಜಾಗವನ್ನು ಸರ್ವೆ ಮಾಡಿಸಿರುವುದಿಲ್ಲ.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲವಕಾಶ ಕೇಳಿದ್ದರಿಂದ, ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**